# ಅಮ್ಮ - ಯು.ಆರ್ .ಅನಂತಮೂರ್ತಿ

ಯು. ಆರ್ ಅನಂತಮೂರ್ತಿಯವರ ಕಾಲ ೧೯೩೨ ರಿಂದ ೨೦೧೪ .ಇವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಮೇಳಿಗೆ ಗ್ರಾಮದಲ್ಲಿ ಜನಿಸಿದರು. ಇವರ ಆತ್ಮಕಥೆ ಸುರಗಿ .ಸಂಸ್ಕಾರ, ಭಾರತೀಪುರ ಭವ, ಅವಸ್ಥೆ ಇವು ಇವರು ಬರೆದ ಕಾದಂಬರಿಗಳು . ಆವಾಹನೆ ,ಮೌನಿ,ಎಂದೆಂದೂ ಮುಗಿಯದ ಕಥೆ ಇವು ಕಥಾ ಸಂಕಲನಗಳು. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ,ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ , ಭಾರತೀಯ ಜ್ಞಾನ ಪೀಠ ಪ್ರಶಸ್ತಿ ದೊರೆತಿದೆ.

ಪ್ರಸ್ತುತ ಗದ್ಯ ಭಾಗವನ್ನು ಇವರ ಆತ್ಮಕಥೆ ಸುರಗಿ ಎಂಬ ಕೃತಿಯಿಂದ ಆರಿಸಲಾಗಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ .**

೧. ಬಾಲ್ಯದಲ್ಲಿ ಲೇಖಕರು ಭಯವಾದಾಗ ಯಾವ ಮಂತ್ರವನ್ನು ಹೇಳಿಕೊಳ್ಳುತ್ತಿದ್ದರು ?

ಉ: ಬಾಲ್ಯದಲ್ಲಿ ಲೇಖಕರು ಭಯವಾದಾಗ ಅರ್ಜುನಃ ಫಲ್ಗುಣೋ ಪಾರ್ಥಃ ಕಿರೀಟೀ ಶ್ವೇತಃವಾಹನಃ ಎಂಬ ಮಂತ್ರವನ್ನು ಹೇಳಿಕೊಳ್ಳುತ್ತಿದ್ದರು.

೨. ಲೇಖಕರ ಮೊದಲ ವಿದ್ಯಾಗುರು ಯಾರು?

ಉ: ಲೇಖಕರ ಮೊದಲ ವಿದ್ಯಾ ಗುರು ಅವರ ಅಮ್ಮ .

೩. ಸಣ್ಣ ಕುಳಿಯೊಳಗಿನ ಕಪ್ಪು ಹುಳವನ್ನು ಯಾವ ಹೆಸರಿನಿಂದ ಕರೆಯುತ್ತಾರೆ ?

ಉ: ಸಣ್ಣ ಕುಳಿಯೊಳಗಿನ ಕಪ್ಪು ಹುಳವನ್ನು ಗುಬ್ಬಿ,ತನ್ನಾದೇವಿ ಎಂದು ಕರೆಯುತ್ತಿದ್ದರು.

೪. ಲೇಖಕರ ಬಾಲ್ಯದ ಪುನರಾವರ್ತಿತ ದೈನಿಕ ಯಾವುದಾಗಿತ್ತು ?

ಉ: ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ ಎಂದು ಮನಸ್ಸಲ್ಲೇ ಪ್ರಾರ್ಥಿಸುತ್ತ ಇರುವುದೇ ಲೇಖಕರ ಬಾಲ್ಯದ ಪುನರಾವರ್ತಿತ ದೈನಿಕವಾಗಿತ್ತು.

೫. ತಿಂಗಳಿಗೊಮ್ಮೆ ಕಾಫಿ ಬೀಜವನ್ನು ತಂದುಕೊಡುತ್ತಿದ್ದವರು ಯಾರು ?

ಉ: ತಿಂಗಳಿಗೊಮ್ಮೆ ಕಾಫಿ ಬೀಜವನ್ನು ತಂದುಕೊಡುತ್ತಿದ್ದವರು ಬ್ಯಾರಿಯವರು.

**ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ .**

೧. ಲೇಖಕರ ಅಕ್ಷರಾಭ್ಯಾಸ ಆರಂಭವಾದದ್ದು ಹೇಗೆ ?

ಉ: ಲೇಖಕರ ಮೊದಲ ವಿದ್ಯಾಗುರು ಅವರ ಅಮ್ಮ. ಕೆರೆಕೊಪ್ಪದ ಮನೆಯಲ್ಲಿದ್ದಾಗ ಅವರ ಅಕ್ಷರಾಭ್ಯಾಸ ಪ್ರಾರಂಭವಾಗಿದ್ದು .ಹಬ್ಬದ ದಿನ ಅವರ ಅಮ್ಮ "ಸರಸ್ವತೀ ನಮಸ್ತುಭ್ಯಂ ವರದೇ ಕಾಮರೂಪಿಣೀ ,ವಿದ್ಯಾರಂಭಂ ಕರಿಷ್ಯಾಮಿ !ಸಿದ್ಧಿರ್ಭವತು ಮೇ ಸದಾ " ಎಂದು ಹೇಳಿ ನೆಲದಲ್ಲಿ ಮರಳು ಹರಡಿ ಕೂರಿಸಿ ಲೇಖಕರ ಬೆರಳು ಹಿಡಿದುಕೊಂಡು ಅ ಎಂಬ ಅಕ್ಷರವನ್ನು ಬರೆಯಿಸಿದ್ದಳು. ಹೀಗೆ ಲೇಖಕರ ಅಕ್ಷರಾಭ್ಯಾಸ ಪ್ರಾರಂಭವಾಯಿತು.

೨. ಮಳೆಗಾಲದ ಆರಂಭಕ್ಕೆ ಮುನ್ನ ಮಲೆನಾಡಿನಲ್ಲಿ ಏನೆಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿತ್ತು ?

ಉ: ಸತತ ಮಳೆ ಸುರಿಯುತ್ತಿದ್ದ ಮಳೆಗಾಲದಲ್ಲಿ ಮನೆಯಲ್ಲಿ ಸೋರದ ಭಾಗವನ್ನು ಹುಡುಕಬೇಕಾಗಿತ್ತು. ಮಳೆಗಾಲದ ಆರಂಭಕ್ಕೆ ಮೊದಲೇ ಒಣ ಸೌದೆ,ಅಕ್ಕಿ,ಬೇಳೆ, ಜೋನಿ ಬೆಲ್ಲವನ್ನು ಸಂಗ್ರಹಿಸುತ್ತಿದ್ದರು. ಬೇಸಿಗೆಯಲ್ಲಿ ಮಳೆಗಾಲದ ದಿನಗಳಿಗೆಂದು ಹಪ್ಪಳ ,ಸಂಡಿಗೆಯಂತಹ ಅನೇಕ ತಿಂಡಿಗಳನ್ನು ಒಣಗಿಸಿ ಇಡುತ್ತಿದ್ದರು.

೩.ನಸುಕಿನಲ್ಲಿ ಲೇಖಕರಿಗೆ ಖುಷಿ ಕೊಡುತ್ತಿದ್ದ ಸಂಗತಿಗಳು ಯಾವುವು ?

ಉ: ನಸುಕಿನಲ್ಲಿ ಎದ್ದು ಮನೆಯೆದುರು ಅರಣ್ಯದ ಅಂಚಿನಲ್ಲಿ ಇದ್ದ ರಂಜದ ಮರವೊಂದರಿಂದ ನೆಲದ ಮೇಲೆ ಚೆಲ್ಲಿರುತ್ತಿದ್ದ ನಕ್ಷತ್ರದ ಆಕಾರದ ರಂಜದ ಹೂಗಳನ್ನು ಆರಿಸುವುದು ,ದೂರ್ವೆಯನ್ನು ಹುಲ್ಲಲ್ಲಿ ಹುಡುಕಿ ಕಿತ್ತು ತರುವುದು ,ಕೇದಗೆ ಅರಳಿದೆಯೆ ,ಮರದ ಮೇಲಿನ ಗೂಡಲ್ಲಿ ಮೊಟ್ಟೆ ಮರಿಯಾಯಿತೆ ಎಂದು ಬಿದಿರಿನ ಸಂದಿಯಿಂದ ನಿತ್ಯ ನೋಡುವುದು ಲೇಖಕರಿಗೆ ಖುಷಿಯ ಸಂಗತಿಗಳು .

೪. ವಿಶೇಷ ಪದಾರ್ಥಗಳನ್ನು ಕಡವಾಗಿ ಪಡೆಯುತ್ತಿದ್ದ ಹಾಗೂ ತೀರಿಸುತ್ತಿದ್ದ ಬಗೆ ಹೇಗೆ ?

ಉ: ಕಾಫಿ ಬೀಜವನ್ನು ಬ್ಯಾರಿಯೊಬ್ಬರು ಲೇಖಕರ ಮನೆಗೆ ತಂದು ಕೊಡುತ್ತಿದ್ದರು. ಈ ವಿಶೇಷ ಪದಾರ್ಥಗಳನ್ನು ಕಡವಾಗಿ ಪಡೆಯುವುದು ವರ್ಷಕ್ಕೊಮ್ಮೆ ,ಅಂದರೆ ದೀಪಾವಳಿಯಿಂದ ಇನ್ನೊಂದು ದೀಪಾವಳಿಗೆ ,ಯುಗಾದಿಯಿಂದ ಇನ್ನೊಂದು

ಯುಗಾದಿಗೆ ,ಗೌರಿ ಹಬ್ಬದಿಂದ ಇನ್ನೊಂದು ಗೌರಿ ಹಬ್ಬದವರೆಗೆ ಕಡದ ಅವಧಿ. ಅವರು ಬೆಳೆದ ಅಡಿಕೆಯನ್ನೋ ,ಭತ್ತವನ್ನೋ ಬದಲಿಗೆ ಕೊಟ್ಟು ಕಡವನ್ನು ತೀರಿಸುತ್ತಿದ್ದರು.

ಐದು- ಆರು ವಾಕ್ಯಗಳಲ್ಲಿ ಉತ್ತರಿಸಿ .

೧. ಮಲೆನಾಡಿನಲ್ಲಿ ಹುಲಿಗಳಿಂದಾಗುತ್ತಿದ್ದ ತೊಂದರೆಯ ಬಗ್ಗೆ ಹೇಗೆ ವರ್ಣಿಸಲಾಗಿದೆ ?

ಉ: ಹುಲಿಗಳ ಕಾಟ ಮಲೆನಾಡಿನ ಊರುಗಳಲ್ಲಿ ಸಾಮಾನ್ಯವಾಗಿತ್ತು. ಲೇಖಕರ ಅಮ್ಮನಿಗೆ ದೂರದಿಂದ ಹುಲಿಯು ಕೂಗುತ್ತಿದ್ದರೆ ತಿಳಿಯುತ್ತಿತ್ತು. ಹುಲಿಗಳ ಶಬ್ದಕ್ಕೆ ಕೊಟ್ಟಿಗೆಯಲ್ಲಿದ್ದ ದನಗಳು ನಡುಗಲು ಶುರು ಮಾಡುತ್ತಿದ್ದವು. ಅವುಗಳ ಕೊರಳಿನಲ್ಲಿದ್ದ ಗಂಟೆ ಜೋರು ಶಬ್ದ ಮಾಡುತ್ತಿತ್ತು. ಚಿಮಣಿ ದೀಪದ ಬೆಳಕಿನಲ್ಲಿ ಲೇಖಕರು ,ಅವರ ಅಮ್ಮ ,ಅಜ್ಜ ,ಹುಲಿ ಎಲ್ಲಿ ಕೊಟ್ಟಿಗೆಗೂ ನುಗ್ಗಿ ಬಿಡುತ್ತದೇನೋ ಎಂದು ಕಾಯುತ್ತಿದ್ದರು. ಮನೆಗೆ ಆಳುಗಳು  ಬಂದರೂ ಯಾರ್ಯಾರ ಮನೆ ದನವನ್ನು ಹುಲಿ ಹಿಡಿಯಿತು ಎಂದು ಮಾತು ಶುರುವಾಗುತ್ತಿತ್ತು. ಹುಲಿ ಮಲೆನಾಡಿನಲ್ಲಿ ನಿಜವಾದ ಹಸಿದ ಕಣ್ಣುಗಳ ಕೋರೆ ದಾಡೆಯ ಮುಖವಾಗಿತ್ತು. ಅಜ್ಜ ಹೇಳಿಕೊಟ್ಟಿದ್ದ ಅರ್ಜುನಃ ಫಲ್ಗುಣೋ ಪಾರ್ಥಃ ಕಿರೀಟೀ ಶ್ವೇತಃವಾಹನಃ ಎಂಬ ಭಯವಾದಾಗ ಅದರ ನಿವಾರಣೆಗಾಗಿ  ಹೇಳುವ ಮಂತ್ರವನ್ನು ಹೇಳುತ್ತ ಲೇಖಕರು ನಿದ್ದೆ ಹೋಗುತ್ತಿದ್ದರು. ಅಮ್ಮ ಮಾತ್ರ ನಿದ್ದೆ ಮಾಡದೇ ಬೆಳಿಗ್ಗೆ ಎದ್ದು ಕೊಟ್ಟಿಗೆಯಲ್ಲಿ ಎಲ್ಲ ದನಗಳಿವೆ ಎಂಬುದನ್ನು ನೋಡಿ ಮನಸ್ಸಿಗೆ ಸಮಾಧಾನ ತಂದುಕೊಳ್ಳುತ್ತಿದ್ದರು.

೨. ಒರಿಜಿನಲ್ ಹಾಗೂ ಚರಟದ ಕಾಫಿಯನ್ನು ಸಿದ್ಧಗೊಳಿಸುತ್ತಿದ್ದ ಬಗೆಯನ್ನು ವಿವರಿಸಿ .

ಉ: ಲೇಖಕರಿಗೆ ಬಾಲ್ಯದಲ್ಲಿ ದೊರೆಯುತ್ತಿದ್ದುದು ಚರಟದ ಕಾಫಿ .ಆದರೆ ಕೆಲವು ಸಾರಿ ಅಜ್ಜಯ್ಯನಿಗೆ ,ಅವರ ತಂದೆ ಶಾನುಭೋಗರಿಗೆ ಅವರ ಗೆಲೆಯರಾದ ಪಟೇಲರಿಗೆ ಒರಿಜಿನಲ್ ಕಾಫಿಪುಡಿಯ ಕಾಫಿ ,ಕಾಫಿ ಬೀಜವನ್ನು ಆಗಲೇ ಹುರಿದು ,ಆಗಲೇ ಪುಡಿಮಾಡಿ ,ಆಗಲೇ ಕುದಿಯುವ ನೀರಿಗೆ ಬೆರೆಸಿ ,ಮುಚ್ಚಿಟ್ಟು ,ಅದರ ಗಸಿ ಇಳಿಯುವಷ್ಟು ಹೊತ್ತು ಕಾದು ,ಅದಕ್ಕಾಗಿಯೇ ಇದ್ದ ಬಟ್ಟೆಗೆ ಸುರಿದು ಹಿಂಡಿ ,ಡಿಕಾಕ್ಷನ್ ಇಳಿಯುವಾಗ ಕಳೆದುಕೊಂಡ ಉಷ್ಣಾಂಶವನ್ನು ಬಿಸಿಬಿಸಿ ಎಮ್ಮೆ ಹಾಲು ಬೆರೆಸಿ ಹದ ಮಾಡಿ ಕಾಪಿ ಮಾಡುವುದು ಸಾಮಾನ್ಯವಾಗಿತ್ತು. ಈ ಕಾಫಿಯನ್ನು ಫಳಫಳ ಹೊಳೆಯುವ ಒಂದು ಹಿತ್ತಾಳೆ ಲೋಟದಿಂದ ಇನ್ನೊಂದು ಲೋಟಕ್ಕೆ ನೊರೆ ಬರುವಂತೆ ಎತ್ತರದಿಂದ ಹಲವುಸಾರಿ ಹುಯ್ದು ಕುಡಿಯಲು ಅಗತ್ಯವಾದ ಬಿಸಿಗದನ್ನು ಇಳಿಸಿ ಸೆರಗು ಮುಚ್ಚಿದ ಕೈಯ ಮೇಲೆ ಅದನ್ನು ಇಟ್ಟುಕೊಂಡು ಹಸನ್ಮುಖಿಯಾಗಿ  ಲೇಖಕರ ಅಮ್ಮ ಕುಡಿಯಲು ಕೊಡುತ್ತಿದ್ದರು . ಒಂದೊಂದು ಸಲ ಈ ಕಾಫಿಯ ಪುಣ್ಯ ಲೇಖಕರಿಗೆ ಸಿಗುತ್ತಿತ್ತು. ಇಲ್ಲವಾದರೆ ನಿತ್ಯ ಈ ಕಾಫಿಯ ಘಮಘಮದ ವಾಸನೆಯನ್ನು ಕೊಂಚವಾದರೂ ಉಳಿಸಿಕೊಂಡ ಅದರ ಚರಟ ಕುದಿಸಿ ಮಾಡಿದ ಕಾಫಿಯ ಸೇವನೆ ಇರುತ್ತಿತ್ತು.

ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ.

೧. “ ಸರಸ್ವತೀ ನಮಸ್ತುಭ್ಯಂ ವರದೇ ಕಾಮರೂಪಿಣಿ "

ಉ: ಈ ಮೇಲಿನ ವಾಕ್ಯವನ್ನು ಯು.ಆರ್.ಅನಂತಮೂರ್ತಿಯವರ ಆತ್ಮಕಥನ ಸುರಗಿಯಿಂದ ಆರಿಸಲಾದ ಅಮ್ಮ ಎನ್ನುವ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರ ಮೊದಲ ವಿದ್ಯಾಗುರು ಅವರ ಅಮ್ಮ . ಅವರು ಕೆರೆಕೊಪ್ಪದ ಮನೆಯಲ್ಲಿದ್ದಾಗ ಅವರಿಗೆ ಅಕ್ಷರಾಭ್ಯಾಸ ಪ್ರಾರಂಭವಾಯಿತು. ಆಗ ಸ್ಕೂಲ್ ಹತ್ತಿರ ಇರಲಿಲ್ಲ. ಅವರ ಅಮ್ಮ ಹಬ್ಬದ ದಿನ ನೆಲದಲ್ಲಿ ಮರಳು ಹರಡಿ ಲೇಖಕರನ್ನು ಕೂರಿಸಿ ಅವರ ಬೆರಳು ಹಿಡಿದು ಅ ಎಂಬ ಅಕ್ಷರವನ್ನು ಬರೆಯಿಸುವ ಪೂರ್ವದಲ್ಲಿ ಮೇಲಿನಂತೆ ಶ್ಲೋಕವನ್ನು ಉಚ್ಚರಿಸಿದ್ದರು ಎಂದು ಲೇಖಕರು ತಾವು ಅಕ್ಷರಾಭ್ಯಾಸ ಪ್ರಾರಂಭಿಸಿದ ದಿನಗಳನ್ನು ಸ್ಮರಿಸಿದ್ದಾರೆ.

ಸ್ವಾರಸ್ಯ : ಅಕ್ಷರಾಭ್ಯಾಸ ಪ್ರಾರಂಭಿಸುವ ಪೂರ್ವದಲ್ಲಿ ವಿದ್ಯಾಧಿದೇವತೆ ಸರಸ್ವತಿಯನ್ನು ಸ್ಮರಿಸುವ ಶ್ಲೋಕವನ್ನು ಹೇಳಲಾಗುತ್ತಿತ್ತು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೨. “ ನನಗೂ ಹೆಣ್ಣು ಮಕ್ಕಳಂತೆ ಉದ್ದ ಕೂದಲಿತ್ತು "

ಉ: ಈ ಮೇಲಿನ ವಾಕ್ಯವನ್ನು ಯು.ಆರ್.ಅನಂತಮೂರ್ತಿಯವರ ಆತ್ಮಕಥನ ಸುರಗಿಯಿಂದ ಆರಿಸಲಾದ ಅಮ್ಮ ಎನ್ನುವ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರು ಚಿಕ್ಕವರಿದ್ದಾಗ ಅವರಿಗೆ ಚೌಲವಾಗಿರಲಿಲ್ಲ. ಅವರಿಗೆ ಹೆಣ್ಣುಮಕ್ಕಳಂತೆ ಉದ್ದ ಕೂದಲಿತ್ತು .ಅವರಿಗೆ ರಂಜದ ಹೂವನ್ನು ತಂದು ಪೋಣಿಸಿ ದೊಡ್ಡ ದೊಡ್ಡ ಸರಗಳನ್ನು ಮಾಡಿ ಅಮ್ಮನಿಗೆ ಮುಡಿಯುವುದಕ್ಕೆ ಕೊಡುವುದು ಅವರೂ ಮುಡಿದುಕೊಳ್ಳುವುದು ಅವರಿಗೆ ಇಷ್ಟವಾಗಿತ್ತು ಎಂದು ವಿವರಿಸುವಾಗ ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಚೌಲವಾಗದೇ ಇದ್ದ ಸಂದರ್ಭದಲ್ಲಿ ತನಗೂ ಹೆಣ್ಣು ಮಕ್ಕಳಿಗೆ ಇದ್ದಂತೆ ಉದ್ದ ಕೂದಲು ಇದ್ದ ದಿನಗಳನ್ನು ,ಅವರ ಅಮ್ಮ ಅವರನ್ನು ಹೆಣ್ಣು ಮಗುವಿನಂತೆ ಅಲಂಕರಿಸುತ್ತಿದ್ದ ದಿನಗಳನ್ನೂ ಲೇಖಕರು ಇಲ್ಲಿ ಸ್ಮರಿಸಿದ್ದಾರೆ.

೩. " ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ"

ಉ: ಈ ಮೇಲಿನ ವಾಕ್ಯವನ್ನು ಯು.ಆರ್.ಅನಂತಮೂರ್ತಿಯವರ ಆತ್ಮಕಥನ ಸುರಗಿಯಿಂದ ಆರಿಸಲಾದ ಅಮ್ಮ ಎನ್ನುವ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಲೇಖಕರಿಗೆ ಬಾಲ್ಯದ ದಿನಗಳಲ್ಲಿ ರಂಜದ ಹೂವುಗಳನ್ನು ಕೊಯ್ಯುವುದು ,ಪೋಣಿಸುವುದು ,ದೂರ್ವೆಯನ್ನು ಆಯ್ದು ತರುವುದು ಮೊದಲಾದವು ಅವರ ಖುಷಿಯ ಸಂಗತಿಗಳಾಗಿದ್ದವು. ಅವರ ಅಮ್ಮ ಕಡಗೋಲಿನಿಂದ ಮೊಸರು ಕಡೆಯುವಾಗ ಏಳು ನಾರಾಯಣನೆ ,ಏಳು ಲಕ್ಷ್ಮೀ ರಮಣ ಎಂಬ ಹಾಡನ್ನು ಹೇಳುವುದನ್ನು ಆಲಿಸುತ್ತ ,ರಂಜದ ಹೂವನ್ನು ಬಾಳೆಯ ನಾರಿನಲ್ಲಿ ಪೋಣಿಸುತ್ತ ಕೃಷ್ಣಪ್ಪಯ್ಯ ಮೇಷ್ಟ್ರಿಗಾಗಿ ಆತಂಕದಲ್ಲಿ ಕಾಯುತ್ತ ಮನಸ್ಸಿನಲ್ಲಿ ಮೇಲಿನಂತೆ ಪ್ರಾರ್ಥಿಸುತ್ತಿದ್ದರು.

ಸ್ವಾರಸ್ಯ : ಕೃಷ್ಣಪ್ಪಯ್ಯ ಮೇಷ್ಟ್ರು ಬಹಳ ಕಟ್ಟುನಿಟ್ಟಿನ ಶಿಸ್ತಿನ ಮೇಷ್ಟ್ರಾಗಿದ್ದರು .ಸಹಜವಾಗಿ ತರಗತಿಗಿಂತ ಹೊರಗಡೆ ಹೋಗುವುದನ್ನು ಕಾಯುವುದು ಬಾಲ್ಯದ ದಿನಗಳಲ್ಲಿ ಸಹಜ ಸ್ವಭಾವವಾಗಿರುವುದು ಅದರಂತೆಯೇ ಲೇಖಕರೂ ಸಹ ಮೇಷ್ಟ್ರು ಬರದಿದ್ದರೆ ಚೆನ್ನ ಎಂದು ಯೋಚಿಸುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೪. " ನನಗೂ ಎಲ್ಲೋ ಒಂದೊಂದು ಸಾರಿ ಈ ಕಾಫಿಯ ಪುಣ್ಯ ಸಿಗುತ್ತಿತ್ತು "

ಉ: ಈ ಮೇಲಿನ ವಾಕ್ಯವನ್ನು ಯು.ಆರ್.ಅನಂತಮೂರ್ತಿಯವರ ಆತ್ಮಕಥನ ಸುರಗಿಯಿಂದ ಆರಿಸಲಾದ ಅಮ್ಮ ಎನ್ನುವ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರ ಬಾಲ್ಯದ ದಿನಗಳಲ್ಲಿ ಕೆರೆಕೊಪ್ಪದ ಮನೆಯಲ್ಲಿ ಅವರಿಗೆ ಚರಟದ ಕಾಫಿ ದೊರೆಯುತ್ತಿತ್ತು. ಆದರೆ ಕೆಲವು ಸಾರಿ ಅವರ ಅಜ್ಜಯ್ಯನಿಗೆ ,ಅವರ ತಂದೆ ಶಾನುಭೋಗರಿಗೆ ಅವರ ಗೆಳೆಯರಾದ ಊರಿನ ಪಟೇಲರಿಗೆ ಒರಿಜಿನಲ್ ಕಾಫಿ ಪುಡಿಯ ಕಾಫಿ ಕೊಡುತ್ತಿದ್ದರು. ಹಾಗೆ ಕೊಡುವಾಗ ಕೆಲವೊಮ್ಮೆ ತನಗೂ ಆ ಭಾಗ್ಯ ದೊರೆಯುತ್ತಿತ್ತು ಎಂದು ಲೇಖಕರು ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಚರಟದ ಕಾಫಿಯೇ ದೊರೆಯುತ್ತಿದ್ದ ಆ ದಿನಗಳಲ್ಲಿ ಕೆಲವೊಮ್ಮೆ ಒರಿಜಿನಲ್ ಕಾಫಿ ಪುಡಿಯಿಂದ ಮಾಡಿದ ಕಾಫಿ ತನಗೆ ದೊರೆಯುತ್ತಿದ್ದ ಖುಷಿಯನ್ನು ಲೇಖಕರು ಸ್ಮರಿಸಿದ ಕ್ಷಣ ಇದಾಗಿದೆ.

೫. "ನನಗೆ ಚರಟದಲ್ಲಿ ಕಾಫಿಯೋ"

ಉ: ಈ ಮೇಲಿನ ವಾಕ್ಯವನ್ನು ಯು.ಆರ್.ಅನಂತಮೂರ್ತಿಯವರ ಆತ್ಮಕಥನ ಸುರಗಿಯಿಂದ ಆರಿಸಲಾದ ಅಮ್ಮ ಎನ್ನುವ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರ ಬಾಲ್ಯದ ದಿನಗಳಲ್ಲಿ ಹಲವು ಬಾರಿ ಎಲ್ಲರಿಗೂ ಕಾಫಿ ಮಾಡುವಷ್ಟು ಅನುಕೂಲ ಅವರ ಮನೆಯಲ್ಲಿ ಇರಲಿಲ್ಲ. ಕೆಲವೊಮ್ಮೆ ಅವರ ಅಮ್ಮ ಸ್ವಲ್ಪ ಕಾಫಿಪುಡಿಯಲ್ಲಿ ಒಂದು ಲೋಟ ಕಾಫಿ ಮಾಡಿ ಅಪ್ಪನಿಗೆ ಕೊಟ್ಟು ಆ ಕಾಫಿ ಮಾಡಿದ ಚರಟದಲ್ಲಿ ಲೇಖಕರಿಗೆ ,ತನಗೆ ಮತ್ತು ಲೇಖಕರ ಅಜ್ಜನಿಗೆ ಕೊಡುತ್ತಿದ್ದರು .

ಆಗ ಲೇಖಕರ ಅಜ್ಜ ಮೇಲಿನಂತೆ ಕೇಳುತ್ತಿದ್ದರು ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ಲೇಖಕರ ಬಾಲ್ಯದ ದಿನಗಳ ಕಷ್ಟವು ಇಲ್ಲಿ ವ್ಯಕ್ತವಾಗಿದೆ.

ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

೧. ಅಧಿಕೃತವಾಗಿ ಲೇಖಕರ ಮೊದಲ ಶಿಕ್ಷಕರು ---- ಕೃಷ್ಣಪ್ಪಯ್ಯ

(ಕೃಷ್ಣಪ್ಪಯ್ಯ ಅಮ್ಮ ತಂದೆ ಶೇಷಗಿರಿ )

೨. ಮಳೆಗಾಲದಲ್ಲಿ ಮಲೆನಾಡಿನಲ್ಲಿ ಯಥೇಚ್ಛವಾಗಿ ಸಿಗುತ್ತಿದ್ದ ಹಣ್ಣು --- ಹಲಸಿನಹಣ್ಣು

(ಮಾವಿನಹಣ್ಣು , ಸೀಬೆಹಣ್ಣು ,ಹಲಸಿನ ಹಣ್ಣು ,ಬಾಳೆಹಣ್ಣು )

೩.'ಪಟ್ಟಾಂಗ' ಈ ಪದದ ಅರ್ಥ ---- ಹರಟೆ

(ಒಳ್ಳೆಯ ಮಾತು ,ಹರಟೆ ,ಪಟ್ಟಕಟ್ಟುವುದು ,ಕೆಟ್ಟಮಾತು )

೪. 'ಕಡೆಗೋಲು' ಪದವು ---- ಸಂಧಿಗೆ ಉದಾಹರಣೆಯಾಗಿದೆ.

(ಆಗಮಸಂಧಿ, ಗುಣಸಂಧಿ, ಲೋಪಸಂಧಿ, ಆದೇಶಸಂಧಿ )

೫. 'ಸಕ್ಕರೆ 'ಪದದ ತತ್ಸಮ ರೂಪ --- ಶರ್ಕರಾ

(ಸಕ್ಕರಿ ,ಸಕ್ಕಾರಿ ,ಶರ್ಕರಾ, ಸರಕಾರಿ )